#ಯುನೈಟೆಡ್ ಬೆಂಗಳೂರು

ಗೆ,

ದಿನಾಂಕ–28–05–2019

ಅಪರ ನಿಬಂಧಕರು, ವಿಚಾರಣೆಗಳು–1
ಮಾನ್ಯ ಲೋಕಾಯುಕ್ತ ಕಛೇರಿ
ಎಂ.ಎಸ್.ಬಿಲ್ಡಿಂಗ್, ಡಾ. ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು–560001

ಮಾನ್ಯರೇ,

ವಿಷಯ : **ಗುಬ್ಬಲಾಳ ಕೆರೆ**ಯ ಬಗ್ಗೆ ಸ್ಥಿತಿಗತಿ ವರದಿ ಸಲ್ಲಿಕೆ

ಉಲ್ಲೇಖ : ಮಾನ್ಯ ಲೋಕಾಯುಕ್ತರ ಆದೇಶ ಸಂಖ್ಯೆ Comp/Lok/BCD-2555/2018

**ಕಂದಾಯ ಇಲಾಖಾ ದಾಖಲೆಗಳ ಪ್ರಕಾರ ಗುಬ್ಬಲಾಳ ಕೆರೆಯು ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಗುಬ್ಬಲಾಳ ಸರ್ವೇ ನಂ 25 ರಲ್ಲಿ ಒಟ್ಟು 8 ಎಕರೆ 10 ಗುಂಟೆ ವಿಸ್ತೀರ್ಣವನ್ನು ಹೊಂದಿದೆ.**

ಈ ಕೆರೆಯಲ್ಲಿ ಕೆಲವು ಸಮಸ್ಯೆಗಳಿದ್ದು, ಅವುಗಳನ್ನು ಈ ಕೆಳಗಿನಂತೆ ತಿಳಿಸಲಾಗಿದೆ.

1. ಈ ಕೆರೆಯು ಕೋಳಿವಾಡ ಸಮಿತಿಯ ವರದಿ ಮತ್ತು ಕಂದಾಯ ದಾಖಲೆಗಳ ಪ್ರಕಾರ ಒಟ್ಟು 8 ಎಕರೆ 10 ಗುಂಟೆ ವಿಸ್ತೀರ್ಣ ಇದ್ದು, ಅದರಲ್ಲಿ 05 ಗುಂಟೆ ಒತ್ತುವರಿಯಾಗಿದೆ.

2. ಕಂದಾಯ ಇಲಾಖಾ ದಾಖಲೆಯ ಪ್ರಕಾರ ಈ ಕೆರೆಯನ್ನು 24–07–2015ರಂದು ಸರ್ವೇ ಮಾಡಿದ್ದು, ಇಂದಿಗೆ 4 ವರ್ಷಗಳು ಕಳೆದಿರುತ್ತವೆ. ಹಾಗಾಗಿ ಪ್ರಸ್ತುತ ಖಾಸಗಿ ಒತ್ತುವರಿ ಆಗಿರುವ ಸಾಧ್ಯತೆ ಇದ್ದು, ಈ ಕೆರೆಯನ್ನು ಸರ್ವೇ ಮಾಡಬೇಕಿದೆ.

3. ಈ ಕೆರೆಗೆ ಸಂಪೂರ್ಣ ಬೇಲಿ ಹಾಕಿರುವುದಿಲ್ಲ. ಕೆರೆಯ ಸುತ್ತ ಸಂಪೂರ್ಣ ಬೇಲಿಯನ್ನು ಹಾಕಬೇಕಿದೆ

4. ಕೆರೆಗೆ ತ್ಯಾಜ್ಯವನ್ನು ಸುರಿಯಲಾಗುತ್ತಿದ್ದು, ಇದನ್ನು ತಡೆಗಟ್ಟಬೇಕಿದೆ.

5. ಸುತ್ತಮುತ್ತಲ ಪ್ರದೇಶಗಳಿಂದ ಕೊಳಚೆ ನೀರು ಹರಿದು ಕೆರೆ ಸಂಪೂರ್ಣ ಕಲುಷಿತಗೊಂಡಿದೆ. ತ್ಯಾಜ್ಯ ನೀರು ಕೆರೆಗೆ ಹರಿಯುವುದನ್ನು ತಡೆಗಟ್ಟಬೇಕಿದೆ.

ಈ ಮೇಲಿನ ಸಮಸ್ಯೆಗಳನ್ನು ಶೀಘ್ರ ಪರಿಹರಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಾವು ಆದೇಶ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಧನ್ಯವಾದಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ

ಎನ್ ಆರ್ ಸುರೇಶ್, ಸಂಚಾಲಕರು, ಯುನೈಟೆಡ್ ಬೆಂಗಳೂರು

ಗೆ,

ದಿನಾಂಕ–28–05–2019

ಅಪರ ನಿಬಂಧಕರು, ವಿಚಾರಣೆಗಳು–1
ಮಾನ್ಯ ಲೋಕಾಯುಕ್ತ ಕಛೇರಿ
ಎಂ.ಎಸ್.ಬಿಲ್ಡಿಂಗ್, ಡಾ.ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು–560001

ಮಾನ್ಯರೇ,

ವಿಷಯ : **ಕಗ್ಗದಾಸಪುರ ಕೆರೆ**ಯ ಬಗ್ಗೆ ಸ್ಥಿತಿಗತಿ ವರದಿ ಸಲ್ಲಿಕೆ

ಉಲ್ಲೇಖ : ಮಾನ್ಯ ಲೋಕಾಯುಕ್ತರ ಆದೇಶ ಸಂಖ್ಯೆ Comp/Lok/BCD-2524/2018 (Dated : 12-03-2019)

**ಕಂದಾಯ ಇಲಾಖಾ ದಾಖಲೆಗಳ ಪ್ರಕಾರ ಕಗ್ಗದಾಸಪುರ ಕೆರೆಯು ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಕಗ್ಗದಾಸಪುರ ಗ್ರಾಮದ ಸರ್ವೇ ನಂ 141ರಲ್ಲಿ 32 ಎಕರೆ 16 ಗುಂಟೆ ಮತ್ತು ಬೈರಸಂದ್ರ ಗ್ರಾಮದ ಸರ್ವೇ ನಂ 5ರಲ್ಲಿ 14 ಎಕರೆ 24 ಗುಂಟೆ ಇದ್ದು, ಒಟ್ಟು ಈ ಕೆರೆಯು 47 ಎಕರೆ ವಿಸ್ತೀರ್ಣವನ್ನು ಹೊಂದಿದೆ.**

ದಿನಾಂಕ 12–03–2019 ರಂದು ಮಾನ್ಯ ಲೋಕಾಯುಕ್ತರು ಹೊರಡಿಸಿರುವ ಆದೇಶದಂತೆ ದಿನಾಂಕ 22–05–2019 ರಂದು ಭೂದಾಖಲೆಗಳ ಸಹಾಯಕ ನಿರ್ದೇಶಕರು–ಬೆಂಗಳೂರು ಪೂರ್ವ ತಾಲ್ಲೂಕು, ಬಿ.ಬಿ.ಎಂ.ಪಿ, ಬಿಡಬ್ಲ್ಯೂಎಸ್ಎಸ್‌ಬಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಇಲಾಖಾ ಅಧಿಕಾರಿಗಳ ಜೊತೆಯಲ್ಲಿ ಜಂಟಿ ಸರ್ವೇಯನ್ನು ಪ್ರಾರಂಭಿಸಿರುತ್ತಾರೆ. ಯುನೈಟೆಡ್ ಬೆಂಗಳೂರು ತಂಡದ ಸದಸ್ಯರು ಈ ಸರ್ವೇಯಲ್ಲಿ ಭಾಗವಹಿಸಿದ್ದು, ಪ್ರಸ್ತುತ ಕೆರೆಯ ಸ್ಥಿತಿಗತಿಯ ಬಗ್ಗೆ ಈ ಕೆಳಗೆ ತಿಳಿಸಲಾಗಿದೆ.

1. ಈ ಕೆರೆಯು ಕೋಳಿವಾಡ ಸಮಿತಿಯ ವರದಿ ಮತ್ತು ಕಂದಾಯ ದಾಖಲೆಗಳ ಪ್ರಕಾರ ಒಟ್ಟು 47 ಎಕರೆ ವಿಸ್ತೀರ್ಣ ಹೊಂದಿದ್ದು, ಅದರಲ್ಲಿ 3 ಎಕರೆ 35 ಗುಂಟೆ ವಿಸ್ತೀರ್ಣ ಒತ್ತುವರಿಯಾಗಿದೆ. (ಕಂದಾಯ ದಾಖಲೆಗಳನ್ನು ಲಗತ್ತಿಸಲಾಗಿದೆ). ಮಾನ್ಯ ಲೋಕಾಯುಕ್ತರ ಆದೇಶದಂತೆ ಕೆರೆಯ ಸರ್ವೇ ಕಾರ್ಯ ಪ್ರಾರಂಭವಾಗಿದ್ದು, ಶೀಘ್ರ ಒತ್ತುವರಿಯನ್ನು ತೆರವುಗೊಳಿಸುವಂತೆ ತಾವು ಆದೇಶಿಸಲು ವಿನಂತಿಸಿಕೊಳ್ಳುತ್ತೇವೆ.
2. ಕೆರೆಗೆ ತ್ಯಾಜ್ಯವನ್ನು ಸುರಿಯಲಾಗುತ್ತಿದ್ದು, ಇದನ್ನು ತಡೆಗಟ್ಟಬೇಕಿದೆ.
3. ಸುತ್ತಮುತ್ತಲ ಪ್ರದೇಶಗಳಿಂದ ಕೊಳಚೆ ನೀರು ಹರಿದು ಕೆರೆ ಸಂಪೂರ್ಣ ಕಲುಷಿತಗೊಂಡಿದೆ. ತ್ಯಾಜ್ಯ ನೀರು ಕೆರೆಗೆ ಹರಿಯುವುದನ್ನು ತಡೆಗಟ್ಟಬೇಕಿದೆ.
4. ಈ ಕೆರೆಗೆ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಸ್ಥಾಪಿಸಬೇಕಿದೆ.

ಈ ಮೇಲಿನ ಸಮಸ್ಯೆಗಳನ್ನು ಶೀಘ್ರ ಪರಿಹರಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಾವು ಆದೇಶ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಧನ್ಯವಾದಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ

ಎನ್ ಆರ್ ಸುರೇಶ್, ಸಂಚಾಲಕರು, ಯುನೈಟೆಡ್ ಬೆಂಗಳೂರು

#ಯುನೈಟೆಡ್ ಬೆಂಗಳೂರು

ಗೆ,

ದಿನಾಂಕ–28–05–2019

ಅಪರ ನಿಬಂಧಕರು, ವಿಚಾರಣೆಗಳು–1
ಮಾನ್ಯ ಲೋಕಾಯುಕ್ತ ಕಛೇರಿ
ಎಂ.ಎಸ್.ಬಿಲ್ಡಿಂಗ್, ಡಾ. ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು–560001

ಮಾನ್ಯರೇ,

ವಿಷಯ : **ಅಬ್ಬಿಗೆರೆ ಕೆರೆ**ಯ ಬಗ್ಗೆ ಸ್ಥಿತಿಗತಿ ವರದಿ ಸಲ್ಲಿಕೆ

ಉಲ್ಲೇಖ : ಮಾನ್ಯ ಲೋಕಾಯುಕ್ತರ ಆದೇಶ ಸಂಖ್ಯೆ Comp/Lok/BCD-2523/2018 (Dated : 12-03-2019)

**ಕಂದಾಯ ಇಲಾಖಾ ದಾಖಲೆಗಳ ಪ್ರಕಾರ ಅಬ್ಬಿಗೆರೆ ಕೆರೆಯು ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಅಬ್ಬಿಗೆರೆ ಗ್ರಾಮದ ಸರ್ವೆ ನಂ 75 ಮತ್ತು ಯಲಹಂಕ ತಾಲ್ಲೂಕಿನ ಸಿಂಗಾಪುರ ಗ್ರಾಮದ ಸರ್ವೇ ನಂ 93ರಲ್ಲಿ ಒಟ್ಟು 47 ಎಕರೆ 11 ಗುಂಟೆ ವಿಸ್ತೀರ್ಣವನ್ನು ಹೊಂದಿದೆ.**

ದಿನಾಂಕ 12–03–2019 ರಂದು ಮಾನ್ಯ ಲೋಕಾಯುಕ್ತರು ಹೊರಡಿಸಿರುವ ಆದೇಶದಂತೆ ದಿನಾಂಕ 25–05–2019 ರಂದು ಭೂದಾಖಲೆಗಳ ಸಹಾಯಕ ನಿರ್ದೇಶಕರು–ಬೆಂಗಳೂರು ಉತ್ತರ ತಾಲ್ಲೂಕು, ಬಿ.ಬಿ.ಎಂ.ಪಿ, ಬಿಡಬ್ಲ್ಯೂಎಸ್ಎಸ್ಬಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಇಲಾಖಾ ಅಧಿಕಾರಿಗಳ ಜೊತೆಯಲ್ಲಿ ಜಂಟಿ ಸರ್ವೇಯನ್ನು ಪ್ರಾರಂಭಿಸಿರುತ್ತಾರೆ. ಯುನೈಟೆಡ್ ಬೆಂಗಳೂರು ತಂಡದ ಸದಸ್ಯರು ಈ ಸರ್ವೇಯಲ್ಲಿ ಭಾಗವಹಿಸಿದ್ದು, ಪ್ರಸ್ತುತ ಕೆರೆಯ ಸ್ಥಿತಿಗತಿಯ ಬಗ್ಗೆ ಈ ಕೆಳಗೆ ತಿಳಿಸಲಾಗಿದೆ.

1. ಈ ಕೆರೆಯು ಕೋಳಿವಾಡ ಸಮಿತಿಯ ವರದಿ ಮತ್ತು ಕಂದಾಯ ದಾಖಲೆಗಳ ಪ್ರಕಾರ ಒಟ್ಟು 47 ಎಕರೆ 11 ಗುಂಟೆ ವಿಸ್ತೀರ್ಣ ಹೊಂದಿದ್ದು, ಅದರಲ್ಲಿ ಒಟ್ಟು 2 ಎಕರೆ 39 ಗುಂಟೆ ವಿಸ್ತೀರ್ಣ ಒತ್ತುವರಿಯಾಗಿದೆ. (ಕೋಳಿವಾಡ ಸಮಿತಿಯ ದಾಖಲೆಗಳನ್ನು ಲಗತ್ತಿಸಲಾಗಿದೆ). ಮಾನ್ಯ ಲೋಕಾಯುಕ್ತರ ಆದೇಶದಂತೆ ಕೆರೆಯ ಸರ್ವೇ ಕಾರ್ಯ ಪ್ರಾರಂಭವಾಗಿದ್ದು, ಶೀಘ್ರ ಒತ್ತುವರಿಯನ್ನು ತೆರವುಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಾವು ಆದೇಶಿಸಲು ವಿನಂತಿಸಿಕೊಳ್ಳುತ್ತೇವೆ.
2. ಕೆರೆಗೆ ತ್ಯಾಜ್ಯವನ್ನು ಸುರಿಯಲಾಗುತ್ತಿದ್ದು, ಇದನ್ನು ತಡೆಗಟ್ಟಬೇಕಿದೆ.
3. ಸುತ್ತಮುತ್ತಲ ಪ್ರದೇಶಗಳಿಂದ ಕೊಳಚೆ ನೀರು ಹರಿದು ಕೆರೆ ಸಂಪೂರ್ಣ ಕಲುಷಿತಗೊಂಡಿದೆ. ತ್ಯಾಜ್ಯ ನೀರು ಕೆರೆಗೆ ಹರಿಯುವುದನ್ನು ತಡೆಗಟ್ಟಬೇಕಿದೆ.
4. ಈ ಕೆರೆಗೆ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಸ್ಥಾಪಿಸಬೇಕಿದೆ.

ಈ ಮೇಲಿನ ಸಮಸ್ಯೆಗಳನ್ನು ಶೀಘ್ರ ಪರಿಹರಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಾವು ಆದೇಶ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಧನ್ಯವಾದಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ

ಎನ್ ಆರ್ ಸುರೇಶ್, ಸಂಚಾಲಕರು, ಯುನೈಟೆಡ್ ಬೆಂಗಳೂರು